

ನನಗೆ ಸೋಜಿಗವೆನ್ನಿಸಿತು. ಇವೆಲ್ಲವೂ ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಅಭಿವ್ಯಕ್ತಿಗಳಲ್ಲವೇ? ಇವೆಲ್ಲವನ್ನೂ ಹೇಳಿಕೊಳ್ಳುವುದರಲ್ಲೇನಿದೆ? ಎಂದುಕೊಂಡು ಕೂತಿದ್ದಾಗ ನನ್ನ ಪಕ್ಕದಲ್ಲಿದ್ದ ವ್ಯಕ್ತಿಯೊಬ್ಬ ಏನೋ ಕುಳಿಚಾರು ಇವ್ಯಾವುದೂ ನಿನಗೆ ಬರುವುದಿಲ್ಲವೇನೋ? ಎಂದು ಕೇಳಿದ. ನನಗೆ ಇವೆಲ್ಲಕ್ಕಿಂತ ದುಪ್ಪಟ್ಟು ಗೊತ್ತಿದೆ ಎಂದೆ. ಅದಕ್ಕವನು ಅದಕ್ಕೇ ಹೇಳುವುದು 'ಗಂಡಸರ ಬುದ್ಧಿ ಮೀಸೆ ಕೆಳಗೆ ಹೆಂಗಸರ ಬುದ್ಧಿ ಮಂಡಿಯಿಂದ ಕೆಳಗೆ' ಎಂದು ಜೋರಾಗಿ ನಕ್ಕ. ಅವರಿವರ ಪ್ರವರಗಳನ್ನು ಆಸಕ್ತಿಯಿಂದ ಕೇಳುತ್ತಿದ್ದ ನಮ್ಮ ಕಾಮರ್ಸ್ ಟೀಚರ್ ಅವನಿಗೆ ಬೈಯುವುದು ಬಿಟ್ಟು ನನ್ನನ್ನು ದುರುಗುಟ್ಟಿ ನೋಡಿದರು. ಭಾರತೀಯ ವಿದ್ಯೆಯ ಅತ್ಯಂತ ಮುಖ್ಯವಾದ ಸಂಗತಿ ನಾನು ಯಾರು? ಎಂದು ಕಂಡುಕೊಳ್ಳುವುದು. ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಆಧ್ಯಾತ್ಮ, ಸಾಹಿತ್ಯ, ಕಲೆ ಮತ್ತು ವಿಜ್ಞಾನಗಳೂ ಕೂಡ ಹುಡುಕಾಟ ನಡೆಸಿವೆ. ವಾಸ್ತವವಾಗಿ ಜನ ತಮ್ಮ ಬಗ್ಗೆ ತಾವು ಏನು ತಿಳಿದಿದ್ದಾರೆ ಎಂಬುದು ಅತ್ಯಂತ ಮುಖ್ಯವಾದ ಸಂಗತಿ ಎಂದು ನಾನು ತಿಳಿದಿದ್ದೆ. ಅದಕ್ಕಿಂತ ಮುಖ್ಯವಾಗಿ ತಮ್ಮ ಬಗ್ಗೆ ಹೇಳಿಕೊಳ್ಳುವ ಸಂಗತಿಗಳಿಂದಲೂ ನಾವು ಗುರುತಿಸಲ್ಪಡುತ್ತೇವೆ ಎಂಬುದನ್ನು ನಾನು ನಿಧಾನವಾಗಿ ತಿಳಿದುಕೊಂಡೆ. ಇದರಿಂದ ಯೋಗ್ಯತೆ ಇಲ್ಲದವರೂ ಯಾವ ರೀತಿಯಲ್ಲಿ ತಮ್ಮನ್ನು ತಾವು ಬಣ್ಣಿಸಿಕೊಳ್ಳುತ್ತಾರೆ ಎಂಬುದನ್ನು ನಿಮ್ಮ ಬದುಕಿನಲ್ಲಿ ಗಮನಿಸಿರುತ್ತೀರಿ.

ಸುಮ್ಮನೆ ಕುಳಿತಿರುವ ವ್ಯಕ್ತಿಯನ್ನು ಕಂಡು ಇವನಿಗೆ ಏನೂ ಗೊತ್ತಿಲ್ಲ ಎಂದು ತಳ್ಳಿಹಾಕುವ ಜನರನ್ನು ನಾನು ನೋಡಿದ್ದೇನೆ. ನನ್ನದೇ ಒಂದು ಉದಾಹರಣೆ– ನಾನು ಓದಿದ್ದು ಹೆಣ್ಣುಮಕ್ಕಳು ಹೆಚ್ಚಿಗೆ ಕಲಿಯುವ ಹಾಗೂ ಅವರ ಹೆಸರಿನಲ್ಲೇ ಇರುವ ಶಾಲೆಯಲ್ಲಿ. ವಸಂತ ಋತುವಿನಲ್ಲಿ ಒಂದು ದಿನ ಇದ್ದಕ್ಕಿದ್ದಂತೆಯೇ ಒಂದು ಪದ್ಯ ನನ್ನ ಮನಸ್ಸಿನಲ್ಲಿ ಹೊಳೆಯಿತು. ಅದು ನನ್ನ ಶಾಲೆಯಲ್ಲಿ ಐದು ವರ್ಷದಿಂದ ನೋಡುತ್ತಿದ್ದ ಒಂದೆರಡು ಮರಗಳು ಅಂದು ನನ್ನ ಮನಸ್ಸಿನಲ್ಲಿ ವಿಶಿಷ್ಟವಾದ ಅನುಭೂತಿ ಉಂಟು ಮಾಡಿದ್ದವು. ಅದೊಂದು ಸಹಜವಾದ ಕ್ರಿಯೆಯಾಗಿದ್ದು ಯಾರಿಗಾದರೂ ತೋರಿಸಬೇಕು. ಇದೊಂದು ಅಸಾಧಾರಣವಾದ ಸಂಗತಿಯೆಂದು ನನಗೆ ಅನ್ನಿಸಿರಲಿಲ್ಲ. ಐದನೆಯ ತರಗತಿಯ ಹುಡುಗನಿಗೆ ಅವೆಲ್ಲಾ ಹೇಗೆ ಗೊತ್ತಿರಬೇಕು ಹೇಳಿ. ನಾನು ಬರೆದ ಬರಹವನ್ನು ನನ್ನ ಪುಸ್ತಕದಲ್ಲಿಟ್ಟಿದ್ದೆ. ಅದು ಅಚಾನಕ್ಕಾಗಿ ನಮ್ಮ ಇಂಗ್ಲಿಷ್ ಟೀಚರ್ ಇಂದಿರಮ್ಮನವರನ್ನು ತಲುಪಿತು. ಇದನ್ನು ಯಾರು ಬರೆದದ್ದು ಎಂದು ಕೇಳಿದರು. ನಾನೇ ಎಂದೆ. ಎಲ್ಲಿ ನೋಡಿ ಬರೆದೆ? ಎಂದು ಕೇಳಿದರು. ನನ್ನ ಮನಸ್ಸಿನಲ್ಲಿ ಅನಿಸಿದ್ದು ಬರೆದೆ ಎಂದರೆ ಅವರು ನಂಬಲೇ ಇಲ್ಲ. ಅವರು ಕೇಳಿದ ಮೊದಲ ಮಾತು ಏನು ಗೊತ್ತೇ? 'ನಿನ್ನನ್ನು ನೋಡಿದರೆ ಹಾಗೆ ಅನ್ನಿಸುವುದಿಲ್ಲವಲ್ಲ?' ಎಂದು.

ಇಂದು ಇಷ್ಟು ದೂರ ಬಂದು ನೋಡಿದರೆ ಅವರ ಮಾತಿನ ಮರ್ಮ ಇನ್ನಷ್ಟು ಬಲವಾಗಿ ಅರ್ಥವಾಗಿದೆ. 'ನೋಡಿದರೆ' ಹೇಗೆ ಗೊತ್ತಾಗುತ್ತದೆ. ನಾನು ಇಂದಿಗೆ ಅದೇ ಮಾತನ್ನು ಅವರ ಬಗ್ಗೆ ಕೇಳಿದರೆ ಉದ್ಧಟತನವಾಗುತ್ತದೆ. ಅವರು ಸರಿಯಾಗಿ ನಾಲ್ಕು ಅಡಿ ಇರಲಿಲ್ಲ. ಕುಳ್ಳಾದ ಶರೀರ. ಆದರೆ ಮಾನವತೆಯೇ ಉಕ್ಕಿ ಹರಿದಂತಹ ಕಂಠ ಸಿರಿ. ಅತ್ಯಂತ ಕಾರುಣ್ಯದಿಂದ ಬಳಸುತ್ತಿದ್ದ ಪದಪುಂಜಗಳು ಅವರೊಬ್ಬರು ಇಂಗ್ಲಿಷ್ ಶಿಕ್ಷಕಿ ಎನ್ನುವುದನ್ನು ತೋರಿಸಿಕೊಳ್ಳುವಂತೆ ಇರಲಿಲ್ಲವಲ್ಲ ಎಂದು ನನಗೆ ಅಂದು ಕೇಳುವಷ್ಟು ಧೈರ್ಯವಿರಲಿಲ್ಲ. ಆದರೆ ಅವರ ಮುಂದಿನ ಮಾತನ್ನು ನೀವು ಕೇಳಲೇಬೇಕು. ಇಷ್ಟು ಸೊಗಸಾದ ಪದ್ಯವನ್ನು ಕದಿಯಬಾರದು. ಕದ್ದರೆ ನಿನ್ನ ಕಿವಿ ದೊಡ್ಡದಾಗುತ್ತದೆ ಎಂದರು. ನಾನು ನನ್ನ ಬಗ್ಗೆ ತೋಡಿಕೊಂಡ ಮಾತುಗಳಿಂದ ಅವರಿಗೆ ನನ್ನ ಮೇಲೆ ನಂಬಿಕೆ ಬಂದಿತು. ಇದರಿಂದ ಆದ ಪ್ರಯೋಜನವೆಂದರೆ ನಾನು ಬಾಲಕವಿ ಎಂದು ಜನಪ್ರಿಯನಾದೆ. ಆದರೂ ನನ್ನ ಬಗ್ಗೆ ನಾನೇ ಅನೇಕ ಬಾರಿ ಅನೇಕರ ಮುಂದೆ ಹೇಳಿಕೊಳ್ಳಬೇಕಿತ್ತು. ಒಂದು ಸಂದರ್ಭದಲ್ಲಿ ನಾನು ನನ್ನ ಪ್ರೌಢಶಾಲೆಗೆ ಸೇರಿದ ಮೇಲೆ ನನ್ನ ಮುಖ್ಯೋಪಾಧ್ಯಾಯರೂ ನಾಡಿನ ಬಹುದೊಡ್ಡ ಬರಹಗಾರರೂ ಆದ ಸಂಪಟೂರು ವಿಶ್ವನಾಥ ಅವರ ಮುಂದೆ ನಿಂತು ನನ್ನ ಕವಿತೆಯನ್ನು ಓದಿದಾಗ ಅವರು ಮೂರು ವರ್ಷವೂ ನನ್ನನ್ನು ಕವಿಯನ್ನಾಗಿ ನಮ್ಮ ಶಾಲೆಯಲ್ಲಿ ಮಾತ್ರವಲ್ಲ ಅಂತರ್ಶಾಲೆ ಚರ್ಚಾಗೋಷ್ಠಿಗಳಲ್ಲಿ ಕೂಡ ಮೆರೆಸಿದರು. ಅವರು ನನ್ನನ್ನು ನಂಬಿದ್ದರು. ಇಷ್ಟಿದ್ದರೂ ಅನೇಕರ ಮುಂದೆ ನನ್ನನ್ನು ನಾನೇ ಹೊಗಳಿಕೊಂಡಿದ್ದೇನೆ. ಹಲವೊಮ್ಮೆ ನನ್ನ ಮೇಲೆ ನಾನೇ ಸಮಾಧಾನ ಮಾಡಿಕೊಂಡಿದ್ದೇನೆ. ತನ್ನನ್ನು ಬಣ್ಣಿಸಿಕೊಂಡರೆ ಮಾತ್ರ ನಮ್ಮ ಮಾತನ್ನು ಕೇಳುವ ವರ್ಗವೊಂದು ನಿಧಾನವಾಗಿ ಸೃಷ್ಟಿಯಾಗುತ್ತಿರುವುದನ್ನು ನಾನು ಬೆಳೆದಂತೆ ಗಮನಿಸುತ್ತಾ ಬಂದಿದ್ದೇನೆ.

ನಾನು ಕಾಲೇಜು ಸೇರಿದ ಮೇಲೆ ಒಂದು ಚರ್ಚಾಗೋಷ್ಠಿಯಲ್ಲಿ ಮಾತನಾಡುತ್ತಿದ್ದೆ. ಕುತೂಹಲವೆಂಬಂತೆ ನಮ್ಮ ಬಾಲಣ್ಣ ಅದೇನು ಕೆಲಸವಿತ್ತೋ ಗೊತ್ತಿಲ್ಲ. ಕಾಲೇಜಿಗೆ ಬಂದಿದ್ದವನು ಕೊನೆಯಲ್ಲಿ ನಿಂತು ಕೇಳುತ್ತಿದ್ದ. ಬಾಲಣ್ಣನ ಬಗ್ಗೆ ನನ್ನ ಇನ್ನೊಂದು ಪ್ರಬಂಧವಿದೆ. ಇಲ್ಲಿ ಪ್ರಾಸಂಗಿಕವಾಗಿ ಅವರನ್ನು ಪರಿಚಯಿಸುವುದು ತಪ್ಪಲ್ಲ. ನನ್ನ ಬದುಕನ್ನು ಪ್ರಭಾವಿಸಿದ ವ್ಯಕ್ತಿಗಳಲ್ಲಿ ಆತನೂ ಒಬ್ಬ. ಬಾಲಣ್ಣ ನನ್ನ ತಾತನ ಓರಗೆಯ ಮನುಷ್ಯ. ನನ್ನಪ್ಪನ ಮದುವೆಯಲ್ಲಿ ಓಲಗ ಊದುವುದರ ಮೂಲಕ ನಮ್ಮ ಮನೆಯ ಸದಸ್ಯನಾಗಿಬಿಟ್ಟಿದ್ದ. ನನ್ನ ತಾತ, ನನ್ನಪ್ಪ, ಚಿಕ್ಕಪ್ಪ, ನನ್ನ ಎಲ್ಲಾ ಅಣ್ಣಂದಿರು, ತಮ್ಮಂದಿರು ಅವನ ಮುಂದೆ ಅಲ್ಲದೇ ಇನ್ನೊಬ್ಬರ ಮುಂದೆ ತಲೆ ತಗ್ಗಿಸುವುದಿಲ್ಲ. ಅಂತಹ ಆಸಾಮಿ ಈತ. ಈತನ ಕಾಯಕ ಹೇರ್ ಕಟ್ಟಿಂಗ್. ಅವನ ಕಾಯಕವನ್ನು ಕನ್ನಡದಲ್ಲಿ ಹೇಳಿ ಆ ವೃತ್ತಿಗೆ ಅವಮಾನವನ್ನು ಮಾಡಿದ್ದೆ ಎಂಬ ಆರೋಪ ನನ್ನ ಮೇಲೆ ಆತ ಹೊರಿಸಿರುವುದರಿಂದ ಈ ಇಂಗ್ಲಿಷ್ ಪದ ಅವನ ಘನತೆಯನ್ನು ಹೆಚ್ಚಿಸುತ್ತದೆ ಎಂದು ಆತ ನಂಬಿದ್ದಾನೆ. ಹಾಗೆಯೇ ನಾನು ಕೂಡ.

ಇರಲಿ, ನನ್ನ ಭಾಷಣವನ್ನು ಕೇಳಿದ್ದ ಬಾಲಣ್ಣ ನನ್ನ ತಂದೆಗೆ ಒಮ್ಮೆ ಮುಖ್ಯದಾರಿಯಲ್ಲಿ ಸಿಕ್ಕು ಆಜ್ಞಾಪಿಸಿದರಂತೆ. ನಾನು ಹೋಗಿ ಅವರ ಅಂಗಡಿಯಲ್ಲೊಮ್ಮೆ ಕಾಣಬೇಕೆಂದು. ಒಂದೆರಡು ದಿನಗಳಲ್ಲಿ ಕಟಿಂಗ್ ಮಾಡಿಸಿಕೊಳ್ಳಲು ಅವರ ಅಂಗಡಿಗೆ ಹೋದೆ. ಅವರು ಮೊದಲು ಹೇಳಿದ ಮಾತು ವೇದಿಕೆಯ ಮೇಲೆ ಹೋಗುವಾಗ ಮೊದಲು ಕ್ಷೌರ ಮಾಡಿರಬೇಕು. ನೀಟಾಗಿ ಡ್ರೆಸ್ ಮಾಡಿರಬೇಕು. ಪೋಡಿಯಂ ಅನ್ನು ಪೂರ್ತಿಯಾಗಿ ಅವಲಂಬಿಸದೇ ಮೈಕ್ ಅನ್ನು ಧೈರ್ಯವಾಗಿ ಬಲಗೈಯ್ಯಲ್ಲಿ ಹಿಡಿದು ಎಡಗೈಯ್ಯನ್ನು ಆಂಗಿಕವಾಗಿ ಅಭಿನಯಿಸುವುದರ ಮೂಲಕ ನಡುವೇದಿಕೆಯಲ್ಲಿ ನಿಂತು ನಮ್ಮ ವಾಗ್ಝರಿಯನ್ನು ಹರಿಯಬೇಕು ಎಂಬುದು. ಆತನ ಮೊದಲ ಆಕ್ಷೇಪ ನಾನು ಅಂದು ಕ್ಷೌರವನ್ನು ಮಾಡದೇ ವೇದಿಕೆಯ ಮೇಲೆ ನಿಂತು ಮಾತಾಡಿದ್ದರಿಂದ ನನ್ನ ಮಾತುಗಳಿಗೆ ತಕ್ಕ ಆಧಾರವನ್ನು ಒದಗಿಸುವುದು ಸಾಧ್ಯವಾಗಿರಲಿಲ್ಲ ಎಂಬುದು. ನನ್ನ ಮಾತನ್ನು ಬಾಲಣ್ಣ ಬಡಪಟ್ಟಿಗೆ ಒಪ್ಪಿರಲಿಲ್ಲ. ಆದರೆ ಈ ಮಾತನ್ನು ಹೆಚ್ಚು ನಂಬಿದ್ದು ನಮ್ಮ ತಾಯಿಯವರು. ಆತ ನಮ್ಮ ತಾಯಿಯವರನ್ನು ಹೊಗಳಿ ಆಗಾಗ ನಮ್ಮ ಮನೆಗೆ ಬಂದು ಕಾಫಿ ಕುಡಿದು ಕೆಲವು ಧಾರ್ಮಿಕ ಮಾತುಗಳನ್ನು ಆಡಿ ಹೋಗುತ್ತಿದ್ದನು. ಹಾಗಾಗಿ ಮತ್ತೆ ನನ್ನ ತಾಯಿಯವರ ಮುಂದೆ ನಾನು ನನ್ನನ್ನು ಬಣ್ಣಿಸಿಕೊಳ್ಳಬೇಕಾಯಿತು.

ನನ್ನ ಗೆಳೆಯನೊಬ್ಬನಿಗೆ ಕೊಳಲು ನುಡಿಸುವುದರಲ್ಲಿ ಅಸಾಧಾರಣವಾದ ಕೌಶಲ್ಯವಿದೆ. ಅವನು ಬಹುದೊಡ್ಡ ವಿದ್ವಾಂಸರಿಂದ ಕ್ರಮವಾಗಿ ಕೊಳಲು ನುಡಿಸುವುದನ್ನು ಕಲಿತಿದ್ದಾನೆ. ಆದರೆ ಅವನಿಗೆ ಕಛೇರಿಗಳು ಮಾತ್ರ ಹೆಚ್ಚಿಗೆ ಗೊತ್ತಾಗುತ್ತಿರಲಿಲ್ಲ. ಆದರೆ ಇನ್ನೊಬ್ಬ ಗೆಳೆಯ ಅಷ್ಟೇನೂ ಮರ್ಯಾದಸ್ಥರಲ್ಲದ ವ್ಯಕ್ತಿಯೊಬ್ಬನಿಂದ ಕೀಬೋರ್ಡ್ ನುಡಿಸುವುದನ್ನು ಕಲಿತಿದ್ದಾನೆ. ಸೋಜಿಗದ ಸಂಗತಿಯೆಂದರೆ ಅವನಿಗೆ ಆಗಾಗ ಕಾರ್ಯಕ್ರಮಗಳು ಬುಕ್ ಆಗುವುದುಂಟು. ಇದಕ್ಕೆ ಕಾರಣ ಈತನು ಯಾರ ಮುಂದೆಯಾದರೂ ತನ್ನನ್ನು ಬಣ್ಣಿಸಿಕೊಳ್ಳುವ ರೀತಿ ಬೆರಗು ಮೂಡುತ್ತದೆ. ಆದರೆ ಅವನು ತನ್ನ ಕಲೆಯ ಬಗ್ಗೆ ತಾನೇ ಹೇಳಿಕೊಳ್ಳುವುದು ಸರಿಯಲ್ಲ ಎಂದು ತಿಳಿದವನು. ಅವನ ಕಲೆಯ ಬಗ್ಗೆ ನಾವು ಹೇಳುವ ಹೊಗಳಿಕೆಗಳನ್ನು ಕೂಡ ಅವನು ಗೆಳೆಯನ ಮೇಲಿನ ಅಭಿಮಾನದಿಂದ ಹೇಳಿದ್ದು ತನ್ನಲ್ಲೇನೂ ಅಂತಹ ವಿಶೇಷತೆಯೇನೂ ಇಲ್ಲ ಎಂದುಬಿಡುತ್ತಾನೆ. ಕೇಳಿಸಿಕೊಂಡವರು ಅವನ ಮಾತನ್ನು ನಂಬಿ ನಮ್ಮನ್ನೇ ಅನುಮಾನಿಸಿ ನೋಡಿದ್ದುಂಟು.

ಇವೆಲ್ಲ ನನ್ನ ಮಟ್ಟಿಗೆ ಅನುಭವಗಳಾಗಿ ಹೊರಹೊಮ್ಮಿದ್ದು ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ ಮೇಲೆ. ಪ್ರತಿದಿನ ನೂರಾರು ವಿದ್ಯಾರ್ಥಿಗಳನ್ನು ನೋಡುವ ನಾವು ಅನೇಕ ರೀತಿಯ ಅನುಭವಗಳಿಗೆ ಸಾಕ್ಷಿಗಳಾಗಿದ್ದಿದೆ. ಕೆಲವರು ತಮ್ಮ ಬಗ್ಗೆ ಏನೂ ಹೇಳಿಕೊಳ್ಳದೆ ಎಷ್ಟೋ ಅವಕಾಶಗಳನ್ನು ಕಳೆದುಕೊಂಡಿದ್ದಿದೆ. ಒಮ್ಮೆ ಒಂದು ಪ್ರತಿಷ್ಠಿತ ಸಂಗೀತ ಶಾಲೆಯು ಅಂತರಕಾಲೇಜು ಸಂಗೀತ